ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್

ಶ್ರೀ ಎನ್. ಕೃಷ್ಣಪ್ಪ ಮತ್ತು ಇನ್ನೊಬ್ಬರು -ವಿರುದ್ಧ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಮತ್ತು ಇನ್ನೊಬ್ಬರು

ಕ್ರಿಮಿನಲ್ ಅರ್ಜಿಸಂಖ್ಯೆ: 468/2021, ದಿನಾಂಕ 24 ನೇ ಮಾರ್ಚ್, 2021

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್:

ಬೆಂಗಳೂರು ಗ್ರಾಮಾಂತರ ಜಿಲ್ಲೆಯ IX ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರ ಕಡತದಲ್ಲಿ ಬಾಕಿ ಇರುವ ದಿ:21.4.2017 ರ ದೂರನ್ನು, ಭ್ರಷ್ಟಾಚಾರ ಪ್ರತಿಬಂಧ ಅಧಿನಿಯಮ, 1988 ರ (ಸಂಕ್ಷಿಪ್ತವಾಗಿ ಪಿ.ಸಿ. ಅಧಿನಿಯಮ) 13 ( 2) ನೇ ಪ್ರಕರಣದೊಂದಿಗೆ ಓದಲಾದ 13 ( 1) (ಸಿ) ಪ್ರಕರಣಗಳ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಎದುರುದಾರರು-ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸಿಬಿ-ದಾಖಲಿಸಿದ ಅಪರಾಧಸಂಖ್ಯೆ: 6/2017 ದಿನಾಂಕ 02.06.2017 ರಲ್ಲಿನ ಎಫ್ಐಆರ್, ಹಾಗೂ ಈ ಮೇಲಿನ ಅಪರಾಧಕ್ಕೆ ಸಂಬಂಧಿಸಿದಂತೆ ದಿನಾಂಕ 19.01.2019 ರ ಸಂಜ್ಞಾನವನ್ನು ತೆಗೆದುಕೊಳ್ಳುವ ಆದೇಶ ಮತ್ತು ಮೇಲ್ಕಂಡ ಅಪರಾಧಕ್ಕಾಗಿ ಎಸ್ಪಿಎಲ್.ಸಿ.ನಂ. 9/2019 ರಲ್ಲಿನ ಆರೋಪಪಟ್ಟಿಗಳನ್ನು ರದ್ದುಪಡಿಸುವಂತೆ ಹಾಗೂ ತತ್ಪರಿಣಾಮವಾಗಿ, ಮುಂದಿನ ಎಲ್ಲಾ ವ್ಯವಹರಣೆಗಳನ್ನು ರದ್ದುಪಡಿಸುವಂತೆ ಈ ನ್ಯಾಯಾಲಯವನ್ನು ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

2. ಮೊಕದ್ದಮೆಯ ವಾಸ್ತವಿಕ ಸಂಗತಿಗಳೆಂದರೆ, ಮೆಸರ್ಸ್ ಫೋರ್ಟಿಯಸ್ ಲ್ಯಾಂಡ್ ಡೆವಲಪರ್ಸ್ ಎಲ್.ಎಲ್.ಪಿ ಸಲ್ಲಿಸಿದ 02.01.2016 ರ ಅರ್ಜಿಯ ಆಧಾರದ ಮೇಲೆ, ದೇವನಹಳ್ಳಿ ತಾಲೂಕಿನ ವಿಶ್ವನಾಥಪುರ ಗ್ರಾಮ ಪಂಚಾಯಿತಿಯು 8.01.2016 ಮತ್ತು 11.3.2016 ರ ತನ್ನ ಸಭೆಯಲ್ಲಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಪತ್ರ ಬರೆದು ಅನುಮತಿ ಕೋರಲು ಹಾಗೂ ಆ ನಂತರ, ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತ್ತು ಎಂದು ಆಪಾದಿಸಿ 2 ನೇ ಎದುರುದಾರನು 1 ನೇ ಎದುರುದಾರ-ಪೊಲೀಸರ ಮುಂದೆ ದೂರನ್ನು ದಾಖಲಿಸಿದ್ದನು.ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಮತ್ತು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ನಿಂದ ಚರ ಮತ್ತು ಸ್ಥಿರ ಸ್ವತ್ತುಗಳ ಸ್ವಾಧೀನ) ನಿಯಮಗಳು, 1996 ರ ಅಡಿಯಲ್ಲಿ ತಾಲೂಕು ಪಂಚಾಯಿತಿಯಿಂದ ಅನುಮತಿಯನ್ನು ಪಡೆಯಬೇಕಾಗಿದೆಯೆಂದೂ ಸಹ ಆಪಾದಿಸಲಾಗಿದೆ.ದೇವನಹಳ್ಳಿಯ ತಾಲೂಕು ಪಂಚಾಯಿತಿಯ ಮುಂದೆ ಅಂಥ ಯಾವುದೇ ಪ್ರಸ್ತಾವನೆ ಇಟ್ಟಿರಲಿಲ್ಲ ಎಂದು ತಿಳಿಸಿ ಕಾರ್ಯನಿರ್ವಾಹಕ ಅಧಿಕಾರಿಯು ಹಿಂಬರಹಪತ್ರವನ್ನೂ ನೀಡಿದ್ದಾರೆ ಎಂದೂ ಸಹ ದೂರಿನಲ್ಲಿ ಆಪಾದಿಸಲಾಗಿದೆ.1 ನೇ ಆರೋಪಿಯು ತನ್ನ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು, ದೇವನಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿರುವ ಬೊಮ್ಮನವರ ಗ್ರಾಮ ಮತ್ತು ಭದ್ರರಾಮನಹಳ್ಳಿ ಗ್ರಾಮದಲ್ಲಿರುವ ಸರ್ವೆಸಂಖ್ಯೆ: 64 ಮತ್ತು ಸರ್ವೆಸಂಖ್ಯೆ: 12 ರಲ್ಲಿ ರಚಿಸಲಾದ ಸಿ.ಎ. ನಿವೇಶನಗಳಸಂಖ್ಯೆ: 1 ಮತ್ತು 2 ನ್ನು ಹಂಚಿಕೆ ಮಾಡಲು ತೀರ್ಮಾನ ಕೈಗೊಂಡಿದ್ದಾನೆಂದು ಸಹ ಇನ್ನುಷ್ಟು ಆಪಾದಿಸಲಾಗಿದ್ದು, ಅದರಂತೆ, ರಾಜ್ಯ ಸರ್ಕಾರವು ದಿನಾಂಕ 21.04.2017 ರ ತನ್ನ ಆದೇಶದ ಪ್ರಕಾರ, ಮೇಲ್ಕಂಡ ಅಪರಾಧಗಳಿಗಾಗಿ ಎಫ್ಐಆರ್ ದಾಖಲಿಸಲು ಎದುರುದಾರ ಪೊಲೀಸ್ಗೆ ನಿರ್ದೇಶಿಸಿತು.

3. ಆ ನಿರ್ದೇಶನಕ್ಕೆ ಅನುಸಾರವಾಗಿ, ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆ ಬಗ್ಗೆ ತನಿಖೆ ನಡೆಸಿ ಆರೋಪಪಟ್ಟಿ ಸಲ್ಲಿಸಿದ್ದಾರೆ ಹಾಗೂ ಅಧಿಕಾರವ್ಯಾಪ್ತಿಯ ಅಧಿವಿಚಾರಣಾ ನ್ಯಾಯಾಲಯವು ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಂಡು ಅರ್ಜಿದಾರರಿಗೆ ಸಮನ್ಸ್ ನೀಡಿದೆ ಮತ್ತು ಸದರಿ ಪ್ರಕರಣವನ್ನು ಎಸ್ಪಿಎಲ್ಸಂಖ್ಯೆ: 9/2019 ಎಂದು ದಾಖಲಿಸಲಾಯಿತು.ಆರೋಪಪಟ್ಟಿಯಲ್ಲಿ 1 ನೇ ಅರ್ಜಿದಾರನನ್ನು 2 ನೇ ಆರೋಪಿಯೆಂದು ಮತ್ತು 2 ನೇ ಅರ್ಜಿದಾರನನ್ನು 3 ನೇ ಆರೋಪಿಯೆಂದು ಗುರುತಿಸಿ ದೋಷಾರೋಪಣೆ ಮಾಡಲಾಗಿದೆ.

4. ಮೆಸರ್ಸ್ ಫೋರ್ಟಿಯಸ್ ಲ್ಯಾಂಡ್ ಡೆವಲಪರ್ ಎಲ್‌ಎಲ್‌ಪಿ ಇವರು ಕ್ಲಬ್ ಹೌಸ್ನ ಉದ್ದೇಶಕ್ಕಾಗಿ, ಗುತ್ತಿಗೆಗಾಗಿ ನೀಡಲಾದ ಮನವಿಗೆ ಅನುಸಾರವಾಗಿ ದಿನಾಂಕ 4.1.2016 ರಂದು ವಿಶೇಷ ಸಭೆ ಕರೆದು ದಿನಾಂಕ 8.1.2016 ರಂದು ಸಭೆ ನಡೆಸಲಾಯಿತು ಎಂಬುದು ಇದರಲ್ಲಿನ ಅರ್ಜಿದಾರರ ವಾದವಾಗಿದೆ.ಪಂಚಾಯಿತಿಯಲ್ಲಿ ಭಾಗವಹಿಸಿದ್ದ ಸದಸ್ಯರು ಈ ವಿಷಯದಲ್ಲಿ ಮುಂದುವರೆಯುವ ಮೊದಲು ತಾಲ್ಲೂಕು ಪಂಚಾಯಿತಿಯಿಂದ ಅಗತ್ಯ ಅನುಮೋದನೆಯನ್ನು ತೆಗೆದುಕೊಳ್ಳಲು ಸರ್ವಾನುಮತದಿಂದ ನಿರ್ಧಾರ ತೆಗೆದುಕೊಂಡರು.ದಿನಾಂಕ 11.03.2016 ರಂದು ಸಾಮಾನ್ಯ ಸಭೆ ಕರೆಯುವ ಬಗ್ಗೆ ದಿನಾಂಕ 03.03.2016 ರಂದು ನೋಟೀಸು ನೀಡಲಾಯಿತು ಮತ್ತು ಆ ಸಭೆಯಲ್ಲಿ ತಾಲೂಕು ಪಂಚಾಯಿತಿಯ ಅನುಮೋದನೆ ಪಡೆದ ನಂತರವೇ ನಾಗರಿಕ ಸೌಲಭ್ಯ (ಸಿಎ) ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಮುಂದಿನ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಲಾಯಿತು ಎಂದು ಸಹ ವಾದಿಸಲಾಗಿದೆ.ದಿನಾಂಕ 11.3.2016 ರ ಠರಾವಿನ ಹಿನ್ನೆಲೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ದಿನಾಂಕ 25.05.2016 ರ ಪತ್ರದ ಮೂಲಕ ಪಂಚಾಯಿತಿಯ ಅನುಮೋದನೆಯನ್ನು ಕೋರಿದರು.ದಿನಾಂಕ 28.06.2016 ರಂದು ಕರೆಯಲಾದ ಸಭೆಗೆ ಹಾಜರಾಗುವಂತೆ ಸೂಚಿಸಿ ದಿನಾಂಕ 25.05.2016 ರ ವಿಶೇಷ ಸಭೆಯ ನೋಟೀಸನ್ನು ಗ್ರಾಮ ಪಂಚಾಯತ್ ಸದಸ್ಯರಿಗೆ ನೀಡಲಾಗಿತ್ತು.ಈ ಸಭೆಯಲ್ಲಿ ಇತರ ವಿಷಯಗಳ ಜೊತೆಗೆ ಸದರಿ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಪಂಚಾಯತ್ ನಿರ್ಧರಿಸಿತ್ತು ಮತ್ತು ತಾಲೂಕು ಪಂಚಾಯತ್ ನೀಡಲಾಗುವ ಅನುಮೋದನೆಗೆ ಅನುಗುಣವಾಗಿ ಕಾರ್ಯ ನಿರ್ವಹಿಸಲು ನಿರ್ಧರಿಸಲಾಯಿತು.

5. ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ದಿನಾಂಕ 20.07.2016 ರ ಪತ್ರದ ಮೇರೆಗೆ ತಾಲೂಕು ಪಂಚಾಯಿತಿಯ ಅನುಮೋದನೆ ಕೋರಿ ದಿನಾಂಕ 28.06.2016 ರ ಸಭೆಯ ನಡಾವಳಿಗಳನ್ನು ಮತ್ತೊಮ್ಮೆ ರವಾನಿಸಿದ್ದು, ಅದಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ- 1 ನೇ ಆರೋಪಿಯು ಸಾರ್ವಜನಿಕ ಕೆಲಸಗಳಿಗೆ ಸಂಬಂಧಿಸಿದಂತೆ ಪ್ರಾಪ್ತವಾಗುವ ಬಡ್ಡಿ ಮೊತ್ತವನ್ನು ಬಳಸುವುದನ್ನು ಹೊರತುಪಡಿಸಿ, ಬೇರೆ ಯಾವುದೇ ಉದ್ದೇಶಕ್ಕಾಗಿ ಠೇವಣಿ ಮೊತ್ತವನ್ನು ಬಳಸಬಾರದು ಎಂಬ ಷರತ್ತಿಗೊಳಪಟ್ಟು, ಗುತ್ತಿಗೆ ಪತ್ರವನ್ನು ಕಾರ್ಯಗತಗೊಳಿಸಲು ವಿಶ್ವನಾಥಪುರ ಗ್ರಾಮ ಪಂಚಾಯಿತಿಗೆ ಅನುಮತಿ ನೀಡಿ, ದಿನಾಂಕ 28.07.2016 ರ ಜ್ಞಾಪನಪತ್ರವನ್ನು ನೀಡಿದರು ಎಂದು ವಾದಿಸಲಾಗಿದೆ.ತಾಲ್ಲೂಕು ಪಂಚಾಯಿತಿಯ ಅನುಮೋದನೆಗೆ ಅನುಸಾರವಾಗಿ, ಗುತ್ತಿಗೆ ಪತ್ರವನ್ನು ದಿನಾಂಕ 15.09.2016 ರಂದು ಕಾರ್ಯಗತ ಗೊಳಿಸಲಾಯಿತು.ಅದರಲ್ಲಿ ಸ್ವಲ್ಪಮಟ್ಟಿಗೆ ದೋಷವಿದ್ದ ಕಾರಣ, 23.01.2017 ರಂದು ಸೇರ್ಪಡಿಕೆ ಪತ್ರವನ್ನು ಕಾರ್ಯಗತಗೊಳಿಸಲಾಯಿತು.ಮುಂದುವರೆಸುತ್ತಾ, ರಾಜ್ಯ ಸರ್ಕಾರವು, ದಿನಾಂಕ 05.12.2017 ರ ತನ್ನ ಆದೇಶದ ಮೇರೆಗೆ, ಗುತ್ತಿಗೆ ಪತ್ರವನ್ನು ರದ್ದುಗೊಳಿಸಿ, ವರದಿಯನ್ನು ಕೇಳಿತು.ಕೂಡಲೇ 2 ನೇ ಅರ್ಜಿದಾರನು ದಿನಾಂಕ 18.01.2018 ರಂದು ತುರ್ತು ಸಭೆಯ ನೋಟೀಸನ್ನು ಹೊರಡಿಸಿದ ದಿನಾಂಕ 19.01.2018 ರಂದು ನಡೆದ ತುರ್ತು ಸಭೆಯಲ್ಲಿ, ಗ್ರಾಮ ಪಂಚಾಯಿತಿಯು ದಿನಾಂಕ 5.12.2018 ರ ಸರ್ಕಾರಿ ಆದೇಶವನ್ನು ಜಾರಿಗೆ ತರಲು ನಿರ್ಧರಿಸಿತು.ದಿನಾಂಕ 19.01.2018 ರಂದು ಗ್ರಾಮ ಪಂಚಾಯತ್ ತೆಗೆದುಕೊಂಡ ನಿರ್ಧಾರವನ್ನು ಗಮನದಲ್ಲಿಟ್ಟುಕೊಂಡು, ದಿನಾಂಕ 06.04.2018 ರ ಪತ್ರದ ಮೇರೆಗೆ ಪಿಡಿಓ ಅವರು ದಿನಾಂಕ 05.12.2017 ರ ಸರ್ಕಾರ ಆದೇಶದ ಹಿನ್ನೆಲೆಯಲ್ಲಿ, ಗುತ್ತಿಗೆ ಪತ್ರವನ್ನು ರದ್ದುಗೊಳಿಸುವಂತೆ ದೇವನಹಳ್ಳಿ ತಾಲೂಕಿನ ಸಬ್-ರಿಜಿಸ್ಟ್ರಾರ್ ರವರಿಗೆ ವಿನಂತಿಸಿದರು.ಗ್ರಾಮ ಪಂಚಾಯತ್ ಕೈಗೊಂಡ ಕ್ರಮವನ್ನು ದಿನಾಂಕ 03.02.2018 ರ ಪತ್ರದ ಮೂಲಕ 1 ನೇ ಆರೋಪಿ ತಾಲೂಕು ಪಂಚಾಯತ್ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ತಿಳಿಸಲಾಯಿತು ಎಂದು ಸಹ ವಾದಿಸಲಾಗಿದೆ.

6. ಅಧಿವಿಚಾರಣಾ ನ್ಯಾಯಾಲಯವು, ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳನ್ನು ವಿವೇಕಯುತವಾಗಿ ಪರಿಶೀಲಿಸದೆ, ಯಾಂತ್ರಿಕವಾಗಿ ಸಂಜ್ಞೇಯತೆಯನ್ನು ತೆಗೆದುಕೊಂಡಿದೆ.ಆದ್ದರಿಂದ, ವ್ಯವಹರಣೆಗಳ ಪ್ರಾರಂಭವೇ ನ್ಯಾಯಾಲಯ ಮತ್ತು ಕಾನೂನು ಪ್ರಕ್ರಿಯೆಯ ಸಂಪೂರ್ಣ ದುರುಪಯೋಗಕ್ಕೆ ಸಮನಾಗುತ್ತದೆ ಎಂದು ವಾದಿಸಲಾಗಿದೆ.ಆದ್ದರಿಂದ, ಪ್ರಸ್ತುತ ಅರ್ಜಿಯನ್ನು ಸಲ್ಲಿಸಲು ಅರ್ಜಿದಾರರನ್ನು ನಿರ್ಬಂಧಿಸಲಾಗಿದೆ.

7. ಪಿ.ಸಿ. ಅಧಿನಿಯಮ, 1988 ರ 19 ನೇ ಪ್ರಕರಣವನ್ನು 2018 ರ ಅಧಿನಿಯಮ 16 ರ ಪ್ರಕಾರ ತಿದ್ದುಪಡಿ ಮಾಡಲಾಗಿದ್ದು, ಅದು, ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರದ ಮಂಜೂರಾತಿಯೊಂದಿಗೆ, ನೌಕರಿಯಲ್ಲಿರುವ ವ್ಯಕ್ತಿಯ ವಿಷಯದಲ್ಲಿ ಅಥವಾ ಸಂದರ್ಭಾನುಸಾರ ಕೇಂದ್ರದ ಅಥವಾ ರಾಜ್ಯದ ವ್ಯವಹಾರಗಳಲ್ಲಿ, ಆರೋಪಿಸಲಾದ ಅಪರಾಧವನ್ನು ಮಾಡಿದ ಬಗ್ಗೆ ಸಂವಹನದ

ಸಮಯದಲ್ಲಿ ಪೂರ್ವ ಮಂಜೂರಾತಿಯನ್ನು ಹೊರತುಪಡಿಸಿ, ಸರ್ಕಾರಿ ನೌಕರನು ಎಸಗಿರುವುದಾಗಿ ಆಪಾದಿಸಲಾದ, 7, 11, 13 ಮತ್ತು 15 ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಎಂದು ಹೇಳುತ್ತದೆ ಎಂದು ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರು ಬಲವಾಗಿ ವಾದಿಸಿದ್ದಾರೆ.ಸದರಿ ಪಿ.ಸಿ. ಅಧಿನಿಯಮ, 1988 ರ ತಿದ್ದುಪಡಿಯಾದ 9 ನೇ ಪ್ರಕರಣವನ್ನು ದಿನಾಂಕ 26.7.2018 ರಿಂದ ಜಾರಿಗೆ ಬರುವಂತೆ 2018 ರ ಅಧಿನಿಯಮ 16 ರ ಮೂಲಕ ಪ್ರತ್ಯಾಯೋಜಿಸಲಾಗಿದೆ.ತಿದ್ದುಪಡಿಯ ಹಿನ್ನೆಲೆಯಲ್ಲಿ,ದಿನಾಂಕ: 26.7.2018 ರಂದು ಇದ್ದಂತಹ ಪ್ರಕರಣಗಳ ಸಂಬಂಧದಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವ ಮಂಜೂರಾತಿಯಿಲ್ಲದೆ, ಆರೋಪಿತ ಅಪರಾಧವನ್ನು ಎಸಗಿದ ಸಮಯದಲ್ಲಿ 66 ನೌಕರನಾಗಿರುವ ಅಥವಾ ನೌಕರನಾಗಿದ್ದ 99 ಸರ್ಕಾರಿ ನೌಕರನ ವಿರುದ್ಧ 7, 11, 13 ಮತ್ತು 15 ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಾರ್ಹವಾಗಿರುವ ಅಪರಾಧವನ್ನು ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

8. ಪ್ರಸ್ತುತ ಪ್ರಕರಣದಲ್ಲಿ, ಆರೋಪಿಸಲಾದ ಎಫ್ಐಆರ್ ದಾಖಲಾಗಿದ್ದ ಸಮಯದಲ್ಲಿ 3 ನೇ ಆರೋಪಿಯು ವಿಶ್ವನಾಥಪುರ ಗ್ರಾಮಪಂಚಾಯಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿದ್ದನು.ಆರೋಪಿತ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಂಡ ದಿನಾಂಕದಂದು ಇದ್ದಂತೆ, 2 ನೇ ಅರ್ಜಿದಾರ ಎಂದರೆ, 3 ನೇ ಆರೋಪಿಯು ಸರ್ಕಾರಿ ನೌಕರನಾಗಿದ್ದನು.ಆದುದರಿಂದ ಪಿ.ಸಿ. ಅಧಿನಿಯಮದ ತಿದ್ದುಪಡಿಯಾದ 19 ನೇ ಪ್ರಕರಣದ ಅನುಸಾರ, ಸಕ್ಷಮ ಪ್ರಾಧಿಕಾರದಿಂದ ಪೂರ್ವ ಮಂಜೂರಾತಿಯನ್ನು ಪಡೆಯದೆ, ದಿನಾಂಕ 26.07.2018 ರಿಂದ ಜಾರಿಗೆ ಬರುವಂತೆ ಪಿ.ಸಿ. ಅಧಿನಿಯಮದ 19 ನೇ ಪ್ರಕರಣವನ್ನು ಅನ್ವಯಿಸುವಷ್ಟರಮಟ್ಟಿಗೆ, ಅಧಿವಿಚಾರಣಾ ಸಂಜ್ಞೆಯತೆಯನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.ಆದ್ದರಿಂದ ದಿನಾಂಕ 19.01.2019 ರ ಸಂಜ್ಞಾನಕ್ಕೆ ತೆಗೆದುಕೊಳ್ಳುವ ಆದೇಶವು ರದ್ದುಪಡಿಸಲು ತಕ್ಕದ್ದಾಗಿದೆ.

9. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಸಂಜ್ಞಾನಕ್ಕೆ ತೆಗೆದುಕೊಳ್ಳುವಾಗ ತಪ್ಪು ಮಾಡಿದ್ದಾರೆ ಮತ್ತು ಸಂಜ್ಞಾನಕ್ಕೆ ತೆಗೆದುಕೊಳ್ಳುವಾಗ ಉಲ್ಲೇಖವನ್ನು ಮಾತ್ರ ಮಾಡಲಾಗಿದೆ ಎಂದು ಮಾನ್ಯ ವಕೀಲರು ತೀವ್ರವಾಗಿ ವಾದಿಸಿದ್ದಾರೆ.ದಾಖಲೆಗಳನ್ನು ಪರಿಶೀಲಿಸಿದ ಮೇಲೆ, ಅಧಿವಿಚಾರಣಾ ನ್ಯಾಯಾಧೀಶರು ತಮ್ಮ ವಿವೇಚನೆಯನ್ನು ಬಳಸಿದ್ದಾರೆ ಎಂಬುದನ್ನು ಅದು ಸೂಚಿಸುವುದಿಲ್ಲ.2 ನೇ ಅರ್ಜಿದಾರನ ಸದಸ್ಯತ್ವವನ್ನು ರದ್ದುಗೊಳಿಸಲಾಯಿತು ಮತ್ತು ಅದನ್ನು ರಿಟ್ ಅರ್ಜಿಸಂಖ್ಯೆ: 20304/2018 ರಲ್ಲಿ ಪ್ರಶ್ನಿಸಲಾಗಿದ್ದು, ಆದೇಶವನ್ನು ರದ್ದುಪಡಿಸುವ ಮೂಲಕ ಅದನ್ನು ಪುರಸ್ಕರಿಸಲಾಯಿತು ಎಂದು ಸಹ ಮಾನ್ಯ ವಕೀಲರು ವಾದಿಸಿದ್ದಾರೆ.ವಾಸ್ತವವಾಗಿ ಗ್ರಾಮ ಪಂಚಾಯಿತಿಯು ಗುತ್ತಿಗೆ ಪತ್ರವನ್ನು ಕಾರ್ಯಗತಗೊಳಿಸುವ ಮೊದಲು ತಾಲೂಕು ಪಂಚಾಯಿತಿಯ ಪೂರ್ವಾನುಮತಿಯನ್ನು ಪಡೆದಿತ್ತು ಎಂದು ವಾದಿಸಲಾಗಿದೆ.ನಿಜವಾಗಿಯೂ, ತಾಲೂಕು ಪಂಚಾಯಿತಿಯು ಮೆಸರ್ಸ್ ಫೋರ್ಟಿಯಸ್ ಲ್ಯಾಂಡ್ ಡೆವಲಪರ್ಸ್ ಎಲ್.ಎಲ್.ಪಿ. ಪರವಾಗಿ ಗುತ್ತಿಗೆ ಪತ್ರವನ್ನು ಕಾರ್ಯಗತಗೊಳಿಸಲು ಅನುಮೋದನೆಯನ್ನು ನೀಡಿ, ದಿನಾಂಕ 28.07.2016ರ ಜ್ಞಾಪನ ಪತ್ರವನ್ನು ನೀಡಿತ್ತು.ಆದ್ದರಿಂದ, ತಾಲೂಕು ಪಂಚಾಯಿತಿಯ ಸೂಕ್ತ ಪೂರ್ವಾನುಮೋದನೆಯನ್ನು ಪಡೆದಿರಲಿಲ್ಲವೆಂದು ಹೇಳಲಾಗದು ಎಂದು ವಾದಿಸಲಾಗಿದೆ.ಇದು ಗ್ರಾಮ ಪಂಚಾಯಿತಿಯ ಒಟ್ಟು ತೀರ್ಮಾನವಾಗಿದ್ದು, ಇದನ್ನು 30 ಲಕ್ಷ ರೂ.ಗಳನ್ನು ಠೇವಣಿಯಾಗಿ ಸಂಗ್ರಹಿಸಿದ ಮೇಲೆ ನಾಗರಿಕ ಸೌಕರ್ಯ (ಸಿಎ) ನಿವೇಶನಗಳನ್ನು ಮೆಸರ್ಸ್ ಫೋರ್ಟಿಯಸ್ ಲ್ಯಾಂಡ್ ಡೆವಲಪರ್ ಎಲ್ಎಲ್ಪಿ ಪರವಾಗಿ ಹಂಚಿಕೆ ಮಾಡಲು ಮತ್ತು ಗ್ರಾಮ ಪಂಚಾಯಿತಿಗೆ ಸೇರಿದ ಸಾರ್ವಜನಿಕ ಸ್ವತ್ತುಗಳ ಅಕ್ರಮ ಒತ್ತುವರಿಯನ್ನು ತಡೆಯಲು ಸಹ ಸರ್ವಾನುಮತದಿಂದ ನಿರ್ಧರಿಸಲಾಯಿತು ಎಂದೂ ಸಹ ವಾದಿಸಲಾಗಿದೆ.ಆದುದರಿಂದ, ರಾಜ್ಯ ಸರ್ಕಾರದ ನಿರ್ಣಯದ ದೃಷ್ಟಿಯಿಂದ, ಗುತ್ತಿಗೆ ಪತ್ರ ರದ್ದಾದರೂ ಸಹ ಇದರಲ್ಲಿನ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಕೃತ್ಯವನ್ನು ಹೊರಿಸಲಾಗದು ಮತ್ತು ಅದನ್ನು ಸಬ್ ರಿಜಿಸ್ಟ್ರಾರ್‌ರವರಿಗೆ ತಿಳಿಸಲಾಗಿದ್ದು, ಗುತ್ತಿಗೆ ಪತ್ರವೂ ಸಹ ರದ್ದಾಯಿತು.ಹೀಗಾಗಿ, ಇದರಲ್ಲಿನ ಅರ್ಜಿದಾರರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಾಸಿಕ್ಯೂಷನ್ ಇರುವುದಿಲ್ಲ.

10. ಮಾನ್ಯ ವಕೀಲರು ತಮ್ಮ ವಾದಗಳ ಸಮರ್ಥನೆಗಾಗಿ, ಪೆಪ್ಸಿ ಫುಡ್ಸ್ ಅಮಿಟೆಡ್ ಮತ್ತು ಇನ್ನೊಬ್ಬರು ವಿರುದ್ಧ ವಿಶೇಷ ನ್ಯಾಯಿಕ ಮ್ಯಾಜಿಸ್ಟ್ರೇಟ್ ಮತ್ತು ಇತರರು ' ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಸಹ ಅವಲಂಬಿತರಾಗಿದ್ದು, ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು ವ್ಯವಹರಣೆಗಳನ್ನು ಚ ರದ್ದುಪಡಿಸುವ ಮೂಲಕ ' ಸಿಆರ್‌ಪಿಸಿ ' ಯ 482 ನೇ ಪ್ರಕರಣವನ್ನು ಅನ್ವಯಿಸುವುದಕ್ಕೆ ಸಂಬಂಧಿಸಿದಂತೆ ಚರ್ಚಿಸಿ, ಭಾರತ ಸಂವಿಧಾನದ 227 ನೇ ಅನುಚ್ಛೇದದ ಅಡಿಯಲ್ಲಿ ಅಥವಾ ' ಸಿಆರ್‌ಪಿಸಿ'ಯ 482 ನೇ ಪ್ರಕರಣದ

ಅಡಿಯಲ್ಲಿ, ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸಲು, ಆರೋಪಪಟ್ಟಿಯನ್ನು ರೂಪಿಸುವ ಹಂತದಲ್ಲಿ ಅಥವಾ ಅಪೀಲಿನ ಮತ್ತು ಪುನರ್ ಪರಿಶೀಲನೆಯ ಪರಿಹಾರವಿದ್ದಾಗ, ಆರೋಪಿಯನ್ನು ಬಿಡುಗಡೆ ಮಾಡುವ ಅಧಿಕಾರವು ನಿರ್ಬಂಧಿತವಾದುದಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

11. ಮಾನ್ಯ ವಕೀಲರು, ಸುನಿಲ್ ಭಾರ್ತಿ ಮಿಟ್ಟಲ್ -ವಿರುದ್ಧ ಕೇಂದ್ರ ತನಿಖಾ ದಳ ಮೊಕದ್ದಮೆಯಲ್ಲಿನ ತೀರ್ಪಿನ ಮೇಲೆಯೂ ಸಹ ಅವಲಂಬಿಸಿದ್ದಾರೆ ಮತ್ತು ಈ ತೀರ್ಪನ್ನು ಉಲ್ಲೇಖಿಸಿ, ಮಾನ್ಯ ವಕೀಲರು, ಪ್ರಕ್ರಿಯೆಯನ್ನು ಜಾರಿಗೊಳಿಸುವುದಕ್ಕಾಗಿ ಸಿಆರ್‌ಪಿಸಿ 204 ನೇ ಪ್ರಕರಣದ ವ್ಯಾಪ್ತಿಗೆ ಸಂಬಂಧಿಸಿದಂತೆ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಸರ್ವೋಚ್ಚ ನ್ಯಾಯಾಲಯವು ಮ್ಯಾಜಿಸ್ಟ್ರೇಟರು ಚ ಪ್ರಕ್ರಿಯೆಯನ್ನು ಜಾರಿಗೊಳಿಸಬಾರದಿತ್ತು ಎಂದು ನಿರ್ಧರಿಸಿ, ಆದೇಶವನ್ನು ರದ್ದುಗೊಳಿಸಿತು ಮತ್ತು ಪ್ರಸ್ತುತ ಆದೇಶವು ಮ್ಯಾಜಿಸ್ಟ್ರೇಟರಿಂದ ಮುಂದಿನ ಅಧಿಕಾರ ಚಲಾವಣೆಗೆ ತೊಂದರೆಯಾಗಬಾರದು ಮತ್ತು ತರುವಾಯ, ವಾರಂಟುಗೊಳಿಸಿದರೆ, ಸಿಆರ್‌ಪಿಸಿಯ 319 ನೇ ಪ್ರಕರಣದ ಅಡಿಯಲ್ಲಿ ಕ್ರಮ ಕೈಗೊಳ್ಳಲು ಅವರಿಗೆ ಸ್ವಾತಂತ್ರವಿರುತ್ತದೆ ಎಂದೂ ಸಹ ಸ್ಪಷ್ಟೀಕರಿಸಿದೆ.ಕಂಪನಿಯು ಆರೋಪಿಯಾದಾಗ, ಅದರ ನಿರ್ದೇಶಕರುಗಳ ವಿರುದ್ಧ ಕ್ರಿಮಿನಲ್ ಉದ್ದೇಶದಿಂದ ಕೂಡಿದ ಸಾಕಷ್ಟು ದೋಷಾರೋಪಣಾ ಸಾಕ್ಷ್ಯಗಳಿದ್ದರೆ, ಪ್ರಾತಿನಿಧಿಕ ಹೊಣೆಗಾರಿಕೆಯ ಸಿದ್ಧಾಂತವನ್ನು ಅನ್ವಯಿಸಿದಾಗ ಮಾತ್ರ ಅವರನ್ನು ಬಂಧಿಸಬಹುದು ಎಂದು ಸರ್ವೋಚ್ಚ ನ್ಯಾಯಾಲಯವು ತೀರ್ಮಾನಿಸಿದೆ.

12. ಮಾನ್ಯ ವಕೀಲರು ಕ್ರಿಮಿನಲ್ ಅರ್ಜಿಸಂಖ್ಯೆ: 5148/2014, ದಿನಾಂಕ 07.11.2014 ಕ್ಕೆ ಸಂಬಂಧಿಸಿದ 5134/2014 ರಲ್ಲಿ ಹೊರಡಿಸಲಾದ ಈ ನ್ಯಾಯಾಲಯದ ವರದಿಯಾಗಿಲ್ಲದ ತೀರ್ಪಿನ ಮೇಲೆಯೂ ಅವಲಂಬಿಸಿದ್ದಾರೆ ಮತ್ತು ಅದರಲ್ಲಿ ಈ ನ್ಯಾಯಾಲಯವು ಆರೋಪಪಟ್ಟಿಯ ಹಾಳೆಗಳು ಪೊಲೀಸ್ ಉಪನಿರೀಕ್ಷಕರು ಸರ್ಕಾರಿ ನೌಕರರ ವಿರುದ್ಧ ಕಾನೂನುಕ್ರಮ ಜರುಗಿಸಲು ಅನುಮತಿ ಕೋರಿದ್ದಾರೆ ಮತ್ತು ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿಯನ್ನು ಇನ್ನೂ ಪಡೆಯಬೇಕಿದೆ ಎಂಬುದನ್ನು ಬಹಿರಂಗಪಡಿಸಿರುತ್ತವೆ ಎಂದು ಅಭಿಪ್ರಾಯಪಟ್ಟಿದೆ.ಹಾಗಾಗಿ, ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ, ಮೇಲೆ ಹೇಳಲಾದ ವ್ಯಕ್ತಿಗಳ ವಿರುದ್ಧ ಆರೋಪಪಟ್ಟಿಯನ್ನು ಸಲ್ಲಿಸಲು ತನಗೆ ಅನುಮತಿ ನೀಡುವಂತೆ ಅವರು ನ್ಯಾಯಾಲಯಕ್ಕೆ ಮನವಿ ಮಾಡಿದರು.ಆರೋಪಿಗಳ ಆರೋಪಿಗಳ ವಿರುದ್ಧ ಆರೋಪಪಟ್ಟಿಯಲ್ಲಿ ಮಾಡಿರುವ ಆರೋಪಗಳು ಸ್ವರೂಪದಲ್ಲಿ ಪ್ರತ್ಯೇಕವಾದವುಗಳೇ?ಅಥವಾ ಒಂದಕ್ಕೊಂದು ಬೆಸೆದುಕೊಂಡಿವೆಯೇ?ಎಂಬುದಕ್ಕೆ ಸಂಬಂಧಿಸಿದಂತೆಯೂ ಸಹ ನ್ಯಾಯಾಲಯವು ಚರ್ಚಿಸಿದೆ.ತೀರ್ಪಿನ 4 ನೇ ಕಂಡಿಕೆಯಲ್ಲಿ ಕೆಲ ಆರೋಪಿಗಳ ವಿರುದ್ಧ ಮಾಡಿದ ಅಪರಾಧಗಳ ವಿರುದ್ಧ ಸಂಜ್ಞಾನಕ್ಕೆ ತೆಗೆದುಕೊಳ್ಳುವಲ್ಲಿ ವಿಶೇಷ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಈ ನ್ಯಾಯಾಲಯವು ರದ್ದು ಪಡಿಸಿದೆ.

13. ಅಲ್ಲದೆ, ಮಾನ್ಯ ವಕೀಲರು ಕ್ರಿಮಿನಲ್ ಅರ್ಜಿಸಂಖ್ಯೆ: 3053/2017 ರಲ್ಲಿ ಹೊರಡಿಸಲಾದದಿನಾಂಕ: 19.4.2017 ರಂದು ನಿರ್ಧರಿಸಲಾದ ಈ ನ್ಯಾಯಾಲಯದ ವರದಿಯಾಗಿಲ್ಲದ ತೀರ್ಪಿನ ಮೇಲೆ ಅವಲಂಬಿಸಿದ್ದಾರೆ ಮತ್ತು 3 ಹಾಗೂ 5 ನೇ ಕಂಡಿಕೆಗಳನ್ನು ಈ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಅದರಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಈ ನ್ಯಾಯಾಲಯವು ಸಂಪೂರ್ಣವಾಗಿ ಅನುಮೋದಿಸಿ, ಪ್ರಾಸಿಕ್ಯೂಷನ್ಗೆ ಮಂಜೂರಾತಿ ಪಡೆಯುವಂತಹ ಸಮಯದವರೆಗೆ ಕೆಲ ಆರೋಪಿಗಳ ವಿರುದ್ಧ ಸ್ವಲ್ಪ ಸ್ವಲ್ಪವೇ ಸಂಜ್ಞಾನಕ್ಕೆ ತೆಗೆದುಕೊಳ್ಳುವುದು ಮತ್ತು ಇತರ ಆರೋಪಿಗಳ ವಿರುದ್ಧ ಸಂಜ್ಞಾನವನ್ನು ತೆಗೆದುಕೊಳ್ಳುವ ಪ್ರಶ್ನೆಯನ್ನು ಮುಂದೂಡುವುದು ಅಧಿವಿಚಾರಣಾ ನ್ಯಾಯಾಲಯಕ್ಕೆ ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.

14. ಅದಕ್ಕೆ ವಿರುದ್ಧವಾಗಿ, ಎದುರುದಾರರ ಪರ ಹಾಜರಾದ ಮಾನ್ಯ ವಕೀಲರು 2016 ರಲ್ಲಿ ಮನವಿಯನ್ನು ಮಾಡಿಕೊಳ್ಳಲಾಯಿತು ಮತ್ತು ತಾಲೂಕು ಪಂಚಾಯಿತಿಯಿಂದ ಪೂರ್ವಾನುಮತಿಯನ್ನು ಪಡೆಯಲು ಠರಾವನ್ನು ಸಹ ಅಂಗೀಕರಿಸಲಾಯಿತು ಮತ್ತು ತರುವಾಯ, ತಾಲೂಕು ಪಂಚಾಯಿತಿಯಿಂದ ಪೂರ್ವ ಮಂಜೂರಾತಿ ಪಡೆಯದೆ, ಗುತ್ತಿಗೆ ಪತ್ರವನ್ನು ಕಾರ್ಯಗತಗೊಳಿಸಲಾಯಿತು ಎಂದು ನಿವೇದಿಸಿದ್ದಾರೆ.ದೂರನ್ನು ದಿನಾಂಕ 21.04.2017 ರಂದು ನೀಡಲಾಗಿದ್ದು, ಅಪರಾಧವು ಪಿ.ಸಿ. ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಬರುತ್ತದೆ ಎಂದು ಮಾನ್ಯ ವಕೀಲರು ಬಲವಾಗಿ ವಾದಿಸಿದ್ದಾರೆ.ಅರ್ಜಿದಾರರ ವಿರುದ್ಧದ ನಿರ್ದಿಷ್ಟ ಆರೋಪವೆಂದರೆ, ತಾಲ್ಲೂಕು ಪಂಚಾಯಿತಿಯಿಂದ ಅನುಮೋದನೆ ಪಡೆಯದೆ, ಕಡತವನ್ನು ತಾಲ್ಲೂಕು

ಪಂಚಾಯಿತಿಯ ಮುಂದೆ ಮಂಡಿಸಿರಲಿಲ್ಲ ಎಂಬುದಾಗಿದೆ.ಸರ್ಕಾರವು ದಿನಾಂಕ 14.05.2017 ರ ತನ್ನ ವ್ಯವಹರಣೆಗಳ ಮೇರೆಗೆ ನಿರ್ಣಯವನ್ನು ಕೈಗೊಂಡಿದ್ದು, ಅದರಿಂದ ಇದು ಕಾನೂನು ಉಲ್ಲಂಘನೆಯಾಗಿದೆ ಮತ್ತು ಕಾನೂನುಬಾಹಿರ ನಿರ್ಧಾರವನ್ನು ಕೈಗೊಳ್ಳಲಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದಿದೆ.ಆದ್ದರಿಂದ, 1 ನೇ ಅರ್ಜಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮಂಜೂರಾತಿ ನೀಡುವ ಮೂಲಕ ದಿನಾಂಕ 21.4.2017 ರ ದೂರಿಗೆ ಸಂಬಂಧಿಸಿದಂತೆ 1 ನೇ ಅರ್ಜಿದಾರನ ವಿರುದ್ಧ ಅನುಮತಿ ನೀಡಲಾಗಿದೆ.

15. ಇದರಲ್ಲಿನ ಎರಡನೇ ಅರ್ಜಿದಾರನ ವಿರುದ್ಧವೂ ಸಹ ಮಂಜೂರಾತಿ ಕೋರಲಾಗಿತ್ತು ಮತ್ತು ಇದರಲ್ಲಿನ 2 ನೇ ಅರ್ಜಿದಾರನ ವಿರುದ್ಧ ಮಂಜೂರಾತಿ ನೀಡುವ ಅಗತ್ಯವಿಲ್ಲ ಎಂಬ ಹಿಂಬರಹವನ್ನು ನೀಡಲಾಗಿತ್ತು ಮತ್ತು ಅವನ ಪದವನ್ನು ಕೊನೆಗೊಳಿಸಲಾಯಿತು ಎಂದು ಮಾನ್ಯ ವಕೀಲರು ಬಲವಾಗಿ ವಾದಿಸಿದ್ದಾರೆ.ಮುಂದುವರೆಸುತ್ತಾ, 2018 ರಲ್ಲಿ ಎಂದರೆ, ದಿನಾಂಕ 26.07.2018 ರಲ್ಲಿ ಮಾಡಲಾದ ತಿದ್ದುಪಡಿಯು ಸ್ವರೂಪದಲ್ಲಿ ಉತ್ತರಾನ್ವಯವಾಗಿದೆ ಮತ್ತು ಅದು ಪೂರ್ವಾನ್ವಯದ್ದಾಗಲು ಸಾಧ್ಯವಿಲ್ಲ.ಅದರಲ್ಲಿ ತಿದ್ದುಪಡಿಯ ಅನ್ವಯಿಸುವಿಕೆಯು ಅಪರಾಧ ಎಸಗುವುದಕ್ಕೆ ಹಿಂದಿನದ್ದಾಗುತ್ತದೆ ಎಂದು ಮಾನ್ಯ ವಕೀಲರು ಬಲವಾಗಿ ವಾದಿಸಿದ್ದಾರೆ.ಹೀಗಾಗಿ, ಅರ್ಜಿದಾರರ ಪರ ಮಾನ್ಯ ವಕೀಲರ ಈ ವಾದವನ್ನು ಅಂಗೀಕರಿಸಲಾಗದು.

16. ಮಾನ್ಯ ವಕೀಲರು ತಮ್ಮ ವಾದದ ಸಮರ್ಥನೆಗಾಗಿ ಕೆ.ಆರ್. ರಮೇಶ್ -ವಿರುದ್ಧ – ಕೇಂದ್ರ ತನಿಖಾ ದಳ ಮತ್ತು ಇನ್ನೊಬ್ಬರು - 2020 ಎಸ್ಸಿಸಿ ಆನ್ಲೈನ್ ಕೆಇಆರ್ 2529, ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ ಮತ್ತು ಅದರ 1 9, 7, 10, 38, 42 ಮತ್ತು 43 ನೇ ಕಂಡಿಕೆಗಳನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಅದರಲ್ಲಿ ಪಿ.ಸಿ. ಅಧಿನಿಯಮದ 13 (1) (ಡಿ) ಪ್ರಕರಣದ ಅಡಿಯಲ್ಲಿ ಅಪರಾಧದ ವ್ಯಾಪ್ತಿಗೆ ಸಂಬಂಧಿಸಿದಂತೆ ವಿಸ್ತಾರವಾಗಿ ಚರ್ಚಿಸಲಾಗಿದೆ ಹಾಗೂ ಪಿ.ಸಿ. ಅಧಿನಿಯಮಕ್ಕೆ ಮಾಡಲಾದ ತಿದ್ದುಪಡಿಯನ್ನೂ ಸಹ ಚರ್ಚಿಸಲಾಗಿದೆ.ಕೇರಳ ಹೈಕೋರ್ಟ್ ಈ ತೀರ್ಪಿನಲ್ಲಿ, ನಿರ್ದಿಷ್ಟವಾಗಿ 44 ನೇ ಕಂಡಿಕೆಯಲ್ಲಿ ಭ್ರಷ್ಟಾಚಾರ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 2018 ಉತ್ತರಾನ್ವಯ ವಾಗುವುದೆಂದು ತೀರ್ಮಾನಿಸಬೇಕು ಎಂದು ಹೇಳಿದೆ ಮತ್ತು ತಿದ್ದುಪಡಿಗೆ ಮುಂಚಿತವಾಗಿ ನೋಂದಾಯಿಸಲಾದ ಮತ್ತು ತನಿಖೆಯ ವಿವಿಧ ಹಂತಗಳಲ್ಲಿ ಬಾಕಿ ಇರುವ ಹಾಗೂ ತನಿಖೆ ಪೂರ್ಣಗೊಂಡು, ಅಧಿವಿಚಾರಣೆಗೆ ಬಾಕಿ ಇರುವ ಪ್ರಕರಣಗಳಿಗೆ ಇದು ಅನ್ವಯಿಸುವುದಿಲ್ಲ.ಈ ತೀರ್ಪನ್ನು ಉಲ್ಲೇಖಿಸುತ್ತಾ, ಮಾನ್ಯ ವಕೀಲರು ಅರ್ಜಿದಾರರ ವಾದವನ್ನು ಅಂಗೀಕರಿಸಲಾಗದು ಎಂದು ಬಲವಾಗಿ ವಾದಿಸಿದ್ದಾರೆ.

17. ಮಾನ್ಯ ವಕೀಲರು ರಿಟ್ ಅರ್ಜಿಸಂಖ್ಯೆ: 29176/2019 ರಲ್ಲಿ ಹೊರಡಿಸಲಾದ, ಈ ನ್ಯಾಯಾಲಯದ 20-12-2019ರ ತೀರ್ಪಿನ ಮೇಲೆಯೂ ಸಹ ಅವಲಂಬಿಸಿದ್ದಾರೆ ಮತ್ತು ತೀರ್ಪಿನ 19 ನೇ ಕಂಡಿಕೆಯನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಅದರಲ್ಲಿ ವ್ಯಕ್ತ ಅಧಿನಿಯಮಿತಿಯ ಮೂಲಕ, ಸೂಚಿಸಿದ ಭಾಷೆಯಿಂದ ಅಗತ್ಯ ಸೂಚನೆಯ ಮೂಲಕ ಅಥವಾ ಶಾಸನವು ವಿವರಣಾತ್ಮಕ ಅಥವಾ ಘೋಷಣಾತ್ಮಕವಾಗಿದ್ದಲ್ಲಿ ಅಥವಾ ಕೆಲವು ದುಷ್ಟ ಅಥವಾ ದುರುಪಯೋಗದ ವಿರುದ್ಧ ಸಾರ್ವಜನಿಕರನ್ನು ರಕ್ಷಿಸುವ ಉದ್ದೇಶದಿಂದ ಶಾಸನವನ್ನು ಜಾರಿಗೆ ತಂದಿದ್ದಲ್ಲಿ, ಶಾಸನವನ್ನು ಪೂರ್ವಾನ್ವಯವಾಗಿ ಜಾರಿಗೆ ತರಬಹುದು ಎ ಂ ದು ಅಭಿಪ್ರಾಯಪಡಲಾಗಿದೆ ಮತ್ತು ಅದರಲ್ಲಿ ಯಾವುದೇ ಸ್ಪಷ್ಟ ತಿದ್ದುಪಡಿಯಿಲ್ಲ ಅಥವಾ ಅದು ತಿದ್ದುಪಡಿಯು ಸ್ವರೂಪದಲ್ಲಿ ಪೂರ್ವಾನ್ವಯವಾಗಿದೆ ಎಂಬ ಭಾಷೆಯಿಂದ ವಿವೇಚನಾತ್ಮಕವಾಗಿಯೂ ಇಲ್ಲ ಎಂಬುದನ್ನು ಸಹ ಗಮನಿಸಲಾಗಿದೆ.

18. ಮಾನ್ಯ ವಕೀಲರು ಎಲ್. ನಾರಾಯಣಸ್ವಾಮಿ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು* ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಚ ತೀರ್ಪಿನ ಮೇಲೆಯೂ ಸಹ ಅವಲಂಬಿಸಿದ್ದಾರೆ.ಮಾನ್ಯ ವಕೀಲರು ಈ ತೀರ್ಪನ್ನು ಉಲ್ಲೇಖಿಸುತ್ತಾ, 21 ನೇ ಕಂಡಿಕೆಯನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಅದರಲ್ಲಿ, ಮಂಜೂರಾತಿ ಪಡೆಯುವುದಕ್ಕೆ ಸಂಬಂಧಿಸಿದಂತೆ ಅಭಯ್ಸಿಂಗ್ ಚೌಟಾಲಾ ಮತ್ತು ಪ್ರಕಾಶ್ಸಿಂಗ್ ಬಾದಲ್ ಮೊಕದ್ದಮೆಯಲ್ಲಿ ವಿಧಿಸಲಾದ ನಿಯಮಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ಚರ್ಚಿಸಿದೆ.ತಪಾಸಣಾ ಅವಧಿಯಲ್ಲಿ ಚ ಸರ್ಕಾರಿ ನೌಕರನು ತಾನು ಹೊಂದಿದ್ದ ಹುದ್ದೆಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದು, ಆದರೆ, "ಹುದ್ದೆ" ಯಲ್ಲಿರುವುದು ಮುಕ್ತಾಯವಾಗಿದ್ದಲ್ಲಿ

ಅಥವಾ ಅವನು ಬೇರೆ ಹುದ್ದೆಯನ್ನು ಹೊಂದಿದ್ದಲ್ಲಿ, ಆಗ ಮಂಜೂರಾತಿ ಅಗತ್ಯವಿರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.ಹಾಗೆಯೇ, ಆಪಾದಿತ ದುರ್ವರ್ತನೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ ಹೊಂದಿದ್ದ ಹುದ್ದೆಗಿಂತ ಭಿನ್ನವಾದ ಹುದ್ದೆಯಲ್ಲಿದ್ದರೆ, ಮಂಜೂರಾತಿ ಪಡೆಯುವ ಅಗತ್ಯವಿರುವುದಿಲ್ಲ.ಅಷ್ಟೇ ಅಲ್ಲದೆ, ಈ ತೀರ್ಪುಗಳಲ್ಲಿ ಒಳಗೊಂಡಿರುವ ವಿವರವಾದ ಚರ್ಚೆಯು, ಅದರಲ್ಲಿ ವಿಧಿಸಲಾದ ನಿಯಮವು, ಸಂವಿಧಾನದ ಅನುಚ್ಛೇದ 309 ಮತ್ತು 311 ರ ಉಪಬಂಧಗಳ ಅಡಿಯಲ್ಲಿ ಸಂವಿಧಾನಾತ್ಮಕ ರಕ್ಷಣೆಯನ್ನು ಅನ್ಯಥಾ ಹೊಂದಿರಬಹುದಾದ ಸರ್ಕಾರಿ ನೌಕರರು ಸೇರಿದಂತೆ ಎಲ್ಲಾ ಸಾರ್ವಜನಿಕ ನೌಕರರ ಪ್ರಕರಣಗಳನ್ನು ಒಳಗೊಳ್ಳುತ್ತದೆ ಹಾಗೂ ಅನ್ವಯಿಸುತ್ತದೆ ಎಂದು ಅಭಿಪ್ರಾಯಪಡಲಾಗಿದೆ.ಈ ತೀರ್ಪುಗಳ ಮೇಲೆ ಅವಲಂಬಿಸಿ ಮಾನ್ಯ ವಕೀಲರು, ಅರ್ಜಿದಾರರ ಪರ ಮಾನ್ಯ ವಕೀಲರ ವಾದವನ್ನು ಅಂಗೀಕರಿಸಲಾಗುವುದಿಲ್ಲ ಮತ್ತು ಅರ್ಜಿದಾರನು ತನ್ನ ಹುದ್ದೆಯನ್ನು ಮುಕ್ತಾಯಗೊಳಿಸಿರುವ ಕಾರಣ ಅವನ ವಿರುದ್ಧ ಮಂಜೂರಾತಿ ಪಡೆಯುವ ಅಗತ್ಯವಿಲ್ಲ ಎಂದು ಬಲವಾಗಿ ವಾದಿಸಿದ್ದಾರೆ.

19. ಸಂಬಂಧಿತ ಪಕ್ಷಕಾರರ ಪರ ವಕೀಲರ ವಾದಗಳನ್ನು ಆಲಿಸಿದ್ದು, ಇಬ್ಬರೂ ಮಾನ್ಯ ವಕೀಲರು ಮೇಲೆ ಉಲ್ಲೇಖಿಸಿದ ತೀರ್ಪುಗಳಲ್ಲಿ ವಿಧಿಸಿದ ನಿಯಮಗಳನ್ನು ಸಹ ಪರಿಶೀಲಿಸಿದ ಮೇಲೆ, ಈ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಮುಖ್ಯ ಅಂಶವೆಂದರೆ, 2018 ರಲ್ಲಿ ಪಿ.ಸಿ. ಅಧಿನಿಯಮಕ್ಕೆ ತಿದ್ದುಪಡಿಯಾದ ನಂತರ ಯಾವುದೇ ಮಂಜೂರಾತಿ ಪಡೆಯಲಿಲ್ಲ ಎಂಬ ಕಾರಣದ ಮೇಲೆ ವ್ಯವಹರಣೆಗಳನ್ನು ರದ್ದುಪಡಿಸಲು, ಸಿಆರ್‌ಪಿಸಿಯ 482 ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಚಲಾಯಿಸಲು ಇದು ಸೂಕ್ತ ಪ್ರಕರಣವೇ?ಮತ್ತು ಹಾಗೆಯೇ, ಮಾನ್ಯ ವಕೀಲರು ಅದನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವಾಗ ತಮ್ಮ ವಿವೇಚನೆಯನ್ನು ಅನ್ವಯಿಸಿದ್ದಾರೆಯೇ?ಎಂಬುದಾಗಿದೆ.ಸಿಆರ್‌ಪಿಸಿ 482 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವಾಗ, ನ್ಯಾಯವಿಫಲತೆಗೆ ಕಾರಣವಾಗುವ ಪ್ರಕ್ರಿಯೆಯ ದುರ್ಬಳಕೆಯ ಪ್ರಕರಣವಿದ್ದಲ್ಲಿ, ನ್ಯಾಯಾಲಯವು ತನ್ನ ಅಧಿಕಾರವನ್ನು ಮಿತವಾಗಿ ಬಳಸಬೇಕಾಗುತ್ತದೆ ಎಂಬುದೂ ಸಹ ಸ್ಥಾಪಿತ ಕಾನೂನಾಗಿದೆ. 'ಪೆಫ್ಸಿ ಫುಡ್ಸ್ ' ಮೊಕದ್ದಮೆಯಲ್ಲಿಯೂ ಸಹ ಆರೋಪವನ್ನು ರೂಪಿಸುವ ಹಂತದಲ್ಲಿ ಆರೋಪಿಯನ್ನು ಬಿಡುಗಡೆ ಮಾಡಲು ಅಥವಾ ಅಪೀಲಿನ ಪರಿಹಾರದ ಇರುವಿಕೆ ಮತ್ತು ಪುನರ್ ಪರಿಶೀಲನೆ ಮಾಡುವ ಈ ನ್ಯಾಯಾಲಯದ ಅಧಿಕಾರವು ಸಂವಿಧಾನದ 227 ನೇ ಅನುಚ್ಛೇದ ಅಥವಾ ಸಿಆರ್‌ಪಿಸಿಯ 482 ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಅನ್ವಯಿಸಲು ನಿರ್ಬಂಧಿಸಿಲ್ಲ ಚ ಎಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

20. ಸರ್ವೋಚ್ಚ ನ್ಯಾಯಾಲಯವು ಸುನಿಲ್ ಭಾರ್ತಿ ಮಿಟ್ಟಲ್ ಮೊಕದ್ದಮೆಯಲ್ಲಿ ಸಿಆರ್‌ಪಿಸಿಯ 204 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವಾಗ, ನ್ಯಾಯಾಲಯದ ವ್ಯಾಪ್ತಿಗೆ ಸಂಬಂಧಿಸಿದಂತೆ ಚರ್ಚಿಸಿದೆ.ಈ ನ್ಯಾಯಾಲಯದ ಇತರ ತೀರ್ಪುಗಳು ಯಾವುದೇ ಮಂಜೂರಾತಿ ಇಲ್ಲದಿರುವ ಕಾರಣದ ಮೇಲೆ ವ್ಯವಹರಣೆಗಳನ್ನು ರದ್ದುಗೊಳಿಸುವುದಕ್ಕೆ ಸಂಬಂಧಪಟ್ಟಿವೆ.

21. 1 ನೇ ಎದುರುದಾರರ ಪರ ಹಾಜರಾದ ಮಾನ್ಯ ವಕೀಲರು, ಪ್ರಾಸಿಕ್ಯೂಷನ್ನೆ ಸಂಬಂಧಿಸಿದಂತೆ ಯಾವಾಗ ಮಂಜೂರಾತಿ ಪಡೆಯುವುದು ಅಗತ್ಯ ಎಂಬ ಬಗ್ಗೆ ಕೇರಳ ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯ ಮತ್ತು ಈ ನ್ಯಾಯಾಲಯದ ಚ ಚ ತೀರ್ಮಾನಗಳ ಮೇಲೆಯೂ ಸಹ ಅವಲಂಬಿಸಿದ್ದಾರೆ.

22. ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿ ವಿಧಿಸಲಾದ ನಿಯಮಗಳನ್ನು ಕಳಕಳಿಯಿಂದ ಪರಿಗಣಿಸಿದ ನಂತರ, ಈ ನ್ಯಾಯಾಲಯವು ಪ್ರಸ್ತುತ ಪ್ರಕರಣದ ವಾಸ್ತವಿಕ ಅಂಶಗಳನ್ನು ಪರಿಶೀಲಿಸಬೇಕು.ಪ್ರಸ್ತುತ ಪ್ರಕರಣದಲ್ಲಿ, 1 ನೇ ಆರೋಪಿಯೊಂದಿಗೆ ಈ ಇಬ್ಬರು ಅರ್ಜಿದಾರರ ವಿರುದ್ಧ ನಿರ್ದಿಷ್ಟ ಆಪಾದನೆಗಳೆಂದರೆ, ಅವರು ಶಾಸನಕ್ಕೆ ವಿರುದ್ಧವಾಗಿ ಮೆಸರ್ಸ್ ಫೋರ್ಟಿಯಸ್ ಲ್ಯಾಂಡ್ ಡೆವಲಪರ್ಸ್ ಎಲ್.ಎಲ್.ಪಿ ಪರವಾಗಿ ಸಿಎ ಸೈಟ್ಸಂಖ್ಯೆ: 1 ಮತ್ತು 2 ಕ್ಕೆ ಸಂಬಂಧಿಸಿದಂತೆ, ಗುತ್ತಿಗೆ ಪತ್ರವನ್ನು ಕಾರ್ಯಗತಗೊಳಿಸಿದ್ದಾರೆ ಮತ್ತು ಆ ಮೂಲಕ ಪಿ.ಸಿ. ಅಧಿನಿಯಮದ ಅಡಿಯಲ್ಲಿ ಅಪರಾಧಗಳನ್ನು ಎಸಗಿದ್ದಾರೆ ಎಂಬವುಗಳಾಗಿವೆ ಎಂಬುದನ್ನು ಗಮನಿಸಬೇಕಿದೆ.ದಾಖಲೆಗಳನ್ನು ಪರಿಶೀಲಿಸಿದ ಮೇಲೆ ದಿನಾಂಕ 21.04.2017 ರ ಆದೇಶದ ಪ್ರಕಾರ 1 ಮತ್ತು 2 ನೇ ಆರೋಪಿಗಳ ವಿರುದ್ಧ ಕ್ರಮ ಜರುಗಿಸಲು ಮಂಜೂರಾತಿ ನೀಡುವುದಕ್ಕೆ ಸಂಬಂಧಿಸಿ ವಿಷಯವನ್ನು 2 ನೇ ದಸ್ತಾವೇಜು ಬಹಿರಂಗಪಡಿಸುತ್ತದೆ.ಈ ನ್ಯಾಯಾಲಯದ ಮುಂದೆ ಅರ್ಜಿದಾರರ ಮುಖ್ಯ ವಾದವೆಂದರೆ, ಗುತ್ತಿಗೆ ಪತ್ರವನ್ನು ಕಾರ್ಯಗತಗೊಳಿಸುವ ಮೊದಲು, ಅವರು ತಾಲ್ಲೂಕು ಪಂಚಾಯಿತಿಯಿಂದ

ಪೂರ್ವಾನುಮತಿಯನ್ನು ಪಡೆದಿದ್ದರು ಎಂಬುದಾಗಿದೆ.ಮಂಜೂರಾತಿ ಪಡೆಯದಿದ್ದಾಗ, ಮೆಸರ್ಸ್ ಫೋರ್ಟಿಯಸ್ ಲ್ಯಾಂಡ್ ಡೆವಲಪರ್ಸ್ ಎಲ್.ಎಲ್.ಪಿ. ಪರವಾಗಿ ನೀಡಲಾದ ಗುತ್ತಿಗೆಯನ್ನು ಸರ್ಕಾರವು 2017 ರಲ್ಲಿ ರದ್ದುಪಡಿಸಿದೆ ಎಂಬ ಸಂಗತಿ ವಿವಾದಿತವಾಗಿಲ್ಲ.ಸರ್ಕಾರದ ಆದೇಶವನ್ನು ಗಮನದಲ್ಲಿಟ್ಟುಕೊಂಡು, ಗುತ್ತಿಗೆಯನ್ನು ರದ್ದುಪಡಿಸಲಾಗಿದೆ ಎಂಬುದು ಅರ್ಜಿದಾರರ ವಾದವಾಗಿದ್ದರೂ ತಾಲ್ಲೂಕು ಪಂಚಾಯಿತಿಯಿಂದ ಅನುಮೋದನೆ ಪಡೆಯದೆ ಅವರು ಗುತ್ತಿಗೆಪತ್ರವನ್ನು ಕಾರ್ಯಗತಗೊಳಿಸಿದ್ದಾರೆಯೇ?ಎಂಬುದು ನ್ಯಾಯಾಲಯದ ಮು ಂ ದೆ ಉಳಿದಿರುವ ಸಂಗತಿಯಾಗಿದೆ.ತಾಲೂಕು ಪಂಚಾಯಿತಿಯಿಂದ ಪೂರ್ವಾನುಮೋದನೆ ಪಡೆಯಲಾಗಿದೆ ಎಂಬ ಅಂಶವನ್ನು ಸಾಬೀತುಪಡಿಸಲು, ನ್ಯಾಯಾಲಯದ ಮುಂದೆ ಯಾವುದೇ ದಸ್ತಾವೇಜನ್ನು ಮಂಡಿಸಿಲ್ಲ.ಆದರೆ, ಪಂಚಾಯತಿಯಿಂದ ಹೊರಡಿಸಲಾದ ಠರಾವಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಮಾತ್ರ ಮಂಡಿಸಲಾಗಿದೆ ಮತ್ತು ವಿಶೇಷ ಸಭೆ ಕರೆಯಲು ಸಂಬಂಧಿಸಿದ ದಸ್ತಾವೇಜುಗಳನ್ನು ಹಾಗೂ ಸಭೆಯ ನಡಾವಳಿಗಳನ್ನೂ ಸಹ ನ್ಯಾಯಾಲಯದ ಮುಂದೆ ಮಂಡಿಸಲಾಗಿದೆ.

23. ಅರ್ಜಿದಾರರ ಪರ ಮಾನ್ಯ ವಕೀಲರ ಮುಖ್ಯ ವಾದವೆಂದರೆ, 3 ನೇ ಆರೋಪಿಯೆಂದು ಗುರುತಿಸಿ ದೋಷಾರೋಪಣೆ ಮಾಡಲಾದ, ಇದರಲ್ಲಿನ 2 ನೇ ಅರ್ಜಿದಾರನ ವಿರುದ್ಧ, ಮಂಜೂರಾತಿ ಪಡೆಯದೆ, ಯಾವುದೇ ಕ್ರಮ ಜರುಗಿಸಲು ಸಾಧ್ಯವಿಲ್ಲ ಎಂಬುದಾಗಿದೆ.ತಿದ್ದುಪಡಿಗೆ ಮುಂಚಿತವಾಗಿ ಪ್ರಕರಣವನ್ನು ದಾಖಲಿಸಲಾಗಿದೆ ಎಂಬುದನ್ನು ಗಮನಿಸುವುದು ಸೂಕ್ತ ಮತ್ತು ದಿನಾಂಕ 26.07.2018 ರಂದು ತಿದ್ದುಪಡಿಯನ್ನು ತರಲಾಯಿತು ಎಂಬುದೂ ಸಹ ನಿರ್ವಿವಾದ.ಆರೋಪಪಟ್ಟಿಯನ್ನು ದಿನಾಂಕ 25.10.2018 ರಂದು ಸಲ್ಲಿಸಲಾಯಿತು ಎಂಬುದನ್ನೂ ಸಹ ಅರ್ಜಿದಾರರ ಪರ ಮಾನ್ಯ ವಕೀಲರು ಈ ನ್ಯಾಯಾಲಯದ ಗಮನಕ್ಕೆ ತಂದರು.ನಿಸ್ಸಂಶಯವಾಗಿ, ತಿದ್ದುಪಡಿಯ ದೃಷ್ಟಿಯಿಂದ, ಸರ್ಕಾರಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಥವಾ ಕಾರ್ಯ ನಿರ್ವಹಿಸುತ್ತಿದ್ದ ಅಥವಾ ಸರ್ಕಾರಿ ಹುದ್ದೆಯಲ್ಲಿರುವ ಸಾರ್ವಜನಿಕ ನೌಕರನ ವಿರುದ್ಧ ಕ್ರಮ ಜರುಗಿಸಲು ಮಂಜೂರಾತಿ ಅಗತ್ಯ ಎಂಬುದು ಸ್ಪಷ್ಟವಾಗಿದೆ.ಆದರೆ, ನ್ಯಾಯಾಲಯದ ಮುಂದಿರುವ ಪ್ರಶ್ನೆಯೆಂದರೆ, ತಿದ್ದುಪಡಿ ಮಾಡಲಾದ ಪ್ರಕರಣದ ದೃಷ್ಟಿಯಿಂದ, 3 ನೇ ಆರೋಪಿಯೆಂದು ಗುರುತಿಸಿ ದೋಷಾರೋಪಣೆ ಮಾಡಲಾದ 2 ನೇ ಅರ್ಜಿದಾರನಿಗೆ ಸಂಬಂಧಿಸಿದಂತೆ ಮಂಜೂರಾತಿ ಅಗತ್ಯವಿದೆ.

24. ಮಂಜೂರಾತಿ ಪಡೆದಿಲ್ಲ ಎಂಬ ಸಂಗತಿಯನ್ನು ಎದುರುದಾರ ಲೋಕಾಯುಕ್ತರ ಪರ ಹಾಜರಾದ ಮಾನ್ಯ ವಕೀಲರು ಸಹ ವಿವಾದಿಸಿಲ್ಲ.ಅರ್ಜಿದಾರರ ಪರ ಮಾನ್ಯ ವಕೀಲರು, 3 ನೇ ಆರೋಪಿಯ ಸದಸ್ಯತ್ವವನ್ನು ಹಿಡಿದಿಟ್ಟುಕೊಳ್ಳಲಾಗಿದೆ ಎಂಬ ಅಂಶವನ್ನು ವಿವಾದಿಸಲಿಲ್ಲ.2020 ಎಸ್ಸಿಸಿ ಆನ್ಲೈನ್ ಕೆಇಆರ್ 2529 ರಲ್ಲಿ ವಿವರವಾಗಿ ವರದಿಯಾದ ಕೇರಳ ಹೈಕೋರ್ಟ್ನ ತೀರ್ಪಿನಲ್ಲಿ ತಿದ್ದುಪಡಿಯಾದ ತರುವಾಯ ಎದುರುದಾರರ ವಕೀಲರು ಅವಲಂಬಿಸಿದ ತೀರ್ಪನ್ನು, ತಿದ್ದುಪಡಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ ಮತ್ತು ಅಂತಿಮವಾಗಿ, ಭ್ರಷ್ಟಾಚಾರ ಪ್ರತಿಬಂಧ (ತಿದ್ದುಪಡಿ) ಅಧಿನಿಯಮ, 2018 ನ್ನು ಉತ್ತರಾನ್ವಯವಾಗಿ ಪರಿಗಣಿಸಬೇಕು ಮತ್ತು ವಿಚಾರಣೆಯ ವಿವಿಧ ಹಂತಗಳಲ್ಲಿ ಬಾಕಿ ಇರುವ ಮತ್ತು ತನಿಖೆ ಪೂರ್ಣಗೊಂಡ ಹಾಗೂ ಅಧಿವಿಚಾರಣೆಗೆ ಬಾಕಿ ಇರುವ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ ಎಂದು 44 ನೇ ಕಂಡಿಕೆಯಲ್ಲಿ ತೀರ್ಮಾನಕ್ಕೆ ಬಂದಿರುತ್ತದೆ.

25. ಸದರಿ ತೀರ್ಪಿನಲ್ಲಿ ವಿಧಿಸಲಾದ ನಿಯಮಗಳನ್ನು ಅವಲೋಕಿಸಿದ ನಂತರ, 2018 ರಲ್ಲಿ ತಂದಿರುವ ತಿದ್ದುಪಡಿಯು ಉತ್ತರಾನ್ವಯವಾಗಿದೆ ಮತ್ತು ತಿದ್ದುಪಡಿಗೆ ಮುಂಚಿತವಾಗಿ ದಾಖಲಾದ ಪ್ರಕರಣಗಳಿಗೆ ಇದು ಅನ್ವಯಿಸುವುದಿಲ್ಲ ಎಂಬುದು ಸ್ಪಷ್ಟವಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ ತಿದ್ದುಪಡಿಗೆ ಮುಂಚಿತವಾಗಿ ಪ್ರಕರಣವನ್ನು ದಾಖಲಿಸಲಾಯಿತು ಮತ್ತು ಮಂಜೂರಾತಿಯನ್ನು ನೀಡುವ ಅಗತ್ಯವಿಲ್ಲ ಎಂದು ತಿಳಿಸುವ ಹಿಂಬರಹವನ್ನು ಸಹ ನೀಡಲಾಯಿತು.ಹೀಗಾಗಿ, 2 ನೇ ಅರ್ಜಿದಾರನ ಅವಧಿ ಪೂರ್ಣಗೊಂಡ ಕಾರಣ, ಅವನ ಹುದ್ದೆಯನ್ನು ಕೊನೆಗೊಳಿಸಿರುವಾಗ, 2018 ರಲ್ಲಿ ತಂದ ತಿದ್ದುಪಡಿಯು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.ಈ ನ್ಯಾಯಾಲಯವು ರಿಟ್ ಅರ್ಜಿಸಂಖ್ಯೆ: 29176/2019 ರ 19 ನೇ ಕಂಡಿಕೆಯಲ್ಲಿಯೂ ಸಹ ತಿದ್ದುಪಡಿಯ ಸೂಚನೆಗೆ ಸಂಬಂಧಿಸಿದಂತೆ ಚರ್ಚಿಸಿದೆ ಮತ್ತು ಶಾಸನವು ವ್ಯಕ್ತ ಅಧಿನಿಯಮಿತಿಯ ಮೂಲಕ ಸೂಚಿಸಿದ ಭಾಷೆಯಿಂದ ಅಗತ್ಯ ಸೂಚನೆಯ ಮೂಲಕ ಅಥವಾ ಶಾಸನವು ವಿವರಣಾತ್ಮಕ ಅಥವಾ ಘೋಷಣಾತ್ಮಕವಾಗಿದ್ದಲ್ಲಿ ಅಥವಾ ಕೆಲವು ದುಷ್ಟ ಅಥವಾ ದುರುಪಯೋಗದ ವಿರುದ್ಧ ಸಾರ್ವಜನಿಕರನ್ನು ರಕ್ಷಿಸುವ ಉದ್ದೇಶಕ್ಕಾಗಿ ಶಾಸನವನ್ನು ಜಾರಿಗೆ ತಂದಿದ್ದಲ್ಲಿ ಮಾತ್ರ ಶಾಸನವು ಪೂರ್ವಾನ್ವಯವಾಗಿ ಜಾರಿಗೆ ಬರುತ್ತದೆ.

26. ಪ್ರಸ್ತುತ ಪ್ರಕರಣದಲ್ಲಿಯೂ ಸಹ, ಇದರಲ್ಲಿನ 2 ನೇ ಅರ್ಜಿದಾರನು ಇತರ ಆರೋಪಿಗಳೊಂದಿಗೆ ಅವನು ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ಗುತ್ತಿಗೆಪತ್ರವನ್ನು ಕಾರ್ಯಗತಗೊಳಿಸುವಲ್ಲಿ ಶಾಮೀಲಾಗಿದ್ದನೆಂದು ಅವನ ವಿರುದ್ಧ ಆರೋಪ ಮಾಡಲಾಗಿದೆ.ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳು ಹೀಗಿದ್ದಾಗ ಮತ್ತು ಎಲ್. ನಾರಾಯಣಸ್ವಾಮಿ ಮೊಕದ್ದಮೆಯ 21 ನೇ ಕಂಡಿಕೆಯಲ್ಲಿಯೂ ಸಹ ಸರ್ವೋಚ್ಚ ನ್ಯಾಯಾಲಯವು, ಪರಿವೀಕ್ಷಣಾ ಅವಧಿಯಲ್ಲಿ ಚ ಸಾರ್ವಜನಿಕ ನೌಕರನು ಸರ್ಕಾರಿ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿದ್ದು, ಆದರೆ 66 " ಆ ಹುದ್ದೆ " ಯಲ್ಲಿರುವುದು ಮುಕ್ತಾಯವಾಗಿದ್ದಲ್ಲಿ, ಅಥವಾ ಅವನು ಬೇರೆ ಹುದ್ದೆಯಲ್ಲಿದ್ದರೆ, ಆಗ ಮಂಜೂರಾತಿಯ ಅಗತ್ಯವಿರುವುದಿಲ್ಲ ಎಂದು ಸ್ಪಷ್ಟವಾಗಿದೆ.ಹಾಗೆಯೇ, ಆಪಾದಿತ ದುರ್ವತ್ರನೆಯು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಸಮಯದಲ್ಲಿ, ಹೊಂದಿದ್ದ ಹುದ್ದೆಗಿಂತ ಭಿನ್ನವಾದ ಹುದ್ದೆಯನ್ನು ಹೊಂದಿದ್ದರೆ ಮಂಜೂರಾತಿ ಪಡೆಯುವ ಅಗತ್ಯವಿರುವುದಿಲ್ಲ.ಹೀಗಾಗಿ, ಮಂಜೂರಾತಿಯಿಲ್ಲದೆ, 2 ನೇ ಅರ್ಜಿದಾರನ ವಿರುದ್ಧ ಯಾವುದೇ ಕಾನೂನುಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ಎಂಬ ಅರ್ಜಿದಾರರ ಪರ ಮಾನ್ಯ ವಕೀಲರ ವಾದವನ್ನು ಅಂಗೀಕರಿಸಲಾಗದು.ಈ ನ್ಯಾಯಾಲಯದ ಮುಂದೆ ಅರ್ಜಿದಾರರ ಪರ ಮಾನ್ಯ ವಕೀಲರ ಇನ್ನೊಂದು ವಾದವೆಂದರೆ, ಅರ್ಜಿದಾರರ ವಿರುದ್ಧ ಆದೇಶಿಕೆಯನ್ನು ಹೊರಡಿಸುವಾಗ ಮಾನ್ಯ ನ್ಯಾಯಾಧೀಶರು ತನ್ನ ವಿವೇಕಯುತ ಮನಸ್ಸನ್ನು ಅನ್ವಯಿಸಿಲ್ಲ ಎಂಬುದಾಗಿದೆ.

27. ಆದೇಶವನ್ನು ಪರಿಶೀಲಿಸಿದ ನಂತರ, ಮಾನ್ಯ ನ್ಯಾಯಾಧೀಶರು, ದಾಖಲೆಯಲ್ಲಿ ಅ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಎಂದರೆ, ಪ್ರಥಮ ಮಾಹಿತಿ, ತನಿಖಾಧಿಕಾರಿಯು ದಾಖಲಿಸಿದ ಸಾಕ್ಷಿಗಳ ಹೇಳಿಕೆ ಮತ್ತು ತನಿಖೆಯ ಸಮಯದಲ್ಲಿ ವಶಪಡಿಸಿಕೊಂಡ ಮತ್ತು ಸಂಗ್ರಹಿಸಿದ ದಾಖಲೆಯನ್ನು ಪರಿಶೀಲಿಸಿದ ತರುವಾಯ, ಹಾಗೆಯೇ ಇಡೀ ಪ್ರಾಸಿಕ್ಯೂಷನ್ ಕಾಗದಪತ್ರಗಳನ್ನು ಅವಗಾಹಿಸಿದ ನಂತರ, ಅಪರಾಧಕ್ಕಾಗಿ, ಅದರಲ್ಲೂ ನಿರ್ದಿಷ್ಟವಾಗಿ, ಪಿ.ಸಿ. ಅಧಿನಿಯಮದ 13 ( 1) (ಸಿ) ಮತ್ತು 13 ( 2) ನೇ ಪ್ರಕರಣಗಳ ಅಡಿಯಲ್ಲಿನ ಅಪರಾಧಕ್ಕಾಗಿ ಸಂಜ್ಞೆಯತೆಯನ್ನು ತೆಗೆದುಕೊಳ್ಳಲು ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಿವೆ ಎಂಬುದು ಮಾನ್ಯ ಮ್ಯಾಜಿಸ್ಟ್ರೇಟರಿಗೆ ಕಂಡುಬಂದಿದೆ ಮತ್ತು ಆದೇಶಿಕೆ ಹೊರಡಿಸಲಾಗಿದೆ.ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳು ಹೀಗಿದ್ದಾಗ ಹಾಗೂ ಮಾನ್ಯ ನ್ಯಾಯಾಧೀಶರು ಆದೇಶಿಕೆಯನ್ನು ಹೊರಡಿಸುವಾಗ ತಮ್ಮ ವಿವೇಚನೆಯನ್ನು ಅನ್ವಯಿಸಿದಾಗ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ತಮ್ಮ ವಿವೇಚನೆಯನ್ನು ಅನ್ವಯಿಸಿಲ್ಲ ಎಂಬ ಅರ್ಜಿದಾರರ ಪರ ಮಾನ್ಯ ವಕೀಲರ ವಾದವನ್ನು ಸಹ ಅಂಗೀಕರಿಸಲಾಗದು.ಆದ್ದರಿಂದ, ಸಿಆರ್‌ಪಿಸಿ'ಯ 482 ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಚಲಾಯಿಸಲು ಇದು ಸೂಕ್ತ ಮೊಕದ್ದಮೆಯಾಗಿಲ್ಲ.

28. ಈ ಮೇಲೆ ಮಾಡಿದ ಚರ್ಚೆಯ ಹಿನ್ನೆಲೆಯಲ್ಲಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತೇನೆ.

ಆದೇಶ

ಅರ್ಜಿಯನ್ನು ಈ ಮೂಲಕ ವಜಾಗೊಳಿಸಲಾಗಿದೆ.

ಮುಖ್ಯ ಅರ್ಜಿಯನ್ನು ಪುರಸ್ಕರಿಸಿರುವ ಹಿನ್ನೆಲೆಯಲ್ಲಿ, ತಡೆಯಾಜ್ಞೆ ಕೋರಿ ಸಲ್ಲಿಸಿದ್ದ ಐ.ಎ.ಸಂಖ್ಯೆ:1/2021 ಪರಿಗಣನೆಗೆ ಉಳಿಯುವುದಿಲ್ಲ ಮತ್ತು ಅದನ್ನು ವಿಲೆ ಮಾಡಲಾಗಿರುತ್ತದೆ.